**ಸಾಕ್ಷಿಯನ್ನು ದಿಃ 03.04.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ಕೃಷ್ಣನಾಯಕ ಮತ್ತು ಸುಕನ್ಯಾ ರವರಿಗೆ ಅನುಶ್ರೀ ಐಶ್ವರ್ಯ ಎಂಬ ಇಬ್ಬರು ಹೆಣ್ಣು ಮಕ್ಕಳು ಎಂದರೆ, ಸರಿ. ಸದರಿಯವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿರುವುದಿಲ್ಲ.

2. ಸದರಿ ಅನುಶ್ರೀ ಮತ್ತು ಐಶ್ವರ್ಯರವರು ಸುಕನ್ಯಾ ಹಾಗೂ ಕೃಷ್ಣನಾಯಕ ರವರ ವಾರಸುದಾರರು ಎಂದರೆ ಸರಿ.

3. ದಾವಾ ಸ್ವತ್ತು ಕೃಷ್ಣನಾಯಕ, ಸುಕನ್ಯಾ ಅನುಶ್ರೀ ಮತ್ತು ಐಶ್ವರ್ಯ ರವರ ಜಂಟಿ ಸ್ವಾಧೀನದಲ್ಲಿರುವ ಆಸ್ತಿ ಎಂದರೆ, ಕೃಷ್ಣನಾಯಕ ಸ್ವಯಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ಆ ಬಗ್ಗೆ ಯಾವ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ, ಯಾವುದೇ ದಾಖಲೆ ಹಾಜರುಪಡಿಸಿಲ್ಲ.

4. ಸದರಿ ವಿಚಾರ ನಿಮಗೆ ಗೊತ್ತಿದ್ದರೂ ಆಸ್ತಿಯನ್ನು ಕಬಳಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

5. ಕರಾರು ಆದ ನಂತರ ಮೂರು ವರ್ಷ ಸಮಯ ಕೇಳಿದ್ದರು. ಮೂರು ವರ್ಷದ ಒಳಗೆ ಬರವಣಿಗೆಯಲ್ಲಿ ನೋಟೀಸು ನೀಡಿದ್ದೀರಾ ಎಂದರೆ, ನೀಡಿಲ್ಲ, ಬಾಯಿ ಮಾತಿನಲ್ಲಿ ಕೇಳಿರುತ್ತೇನೆ.

6. ಮೂರು ವರ್ಷದ ನಂತರ 2017 ಹಾಗೂ 2018 ರಲ್ಲಿ ಎರಡು ಬಾರಿ ನೋಟೀಸು ನೀಡಿರುತ್ತೇನೆ, ದಿನಾಂಕಗಳು ನನಗೆ ನೆನಪಿಲ್ಲ.

7. 2017 ರಲ್ಲಿ ಹುಣಸೆಕುಪ್ಪೆ ವಿಳಾಸಕ್ಕೆ ನೋಟೀಸು ನೀಡಿರುತ್ತೇನೆ, ಅದು ತಲುಪಿದ ಬಗ್ಗೆ ಗೊತ್ತಿಲ್ಲ.

8. ನೀವು ಸಲ್ಲಿಸಿರುವ ದಾವೆ ಕಾಲಪರಿಮಿತಿಯ ಒಳಗೆ ಇಲ್ಲ ಎಂದರೆ, ಕೃಷ್ಣನಾಯಕ ರವರು ಕಾಲಾವಧಿಯನ್ನು ಕೇಳಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಯಾವುದೇ ಬರವಣಿಗೆಯಲ್ಲಿ ತಿಳಿಸಿಲ್ಲ ಎಂದು ನುಡಿಯುತ್ತಾರೆ.

9. ಕೃಷ್ಣನಾಯಕರು 2010 ರಿಂದ 2018 ರ ವರೆಗೆ ಹೆಚ್.ಡಿ.ಕೋಟೆಯ, ಹಳೆ ತಾಲೂಕು ಕಛೇರಿ ಎದುರಿಗೆ ಇರುವ ಅಯ್ಯಂಗಾರ್ ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಬೇಕರಿಗೆ ಅವರು ದ್ವಿಚಕ್ರವಾಹನದಲ್ಲ ಓಡಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

10. ನೀವು ಹಾಗೂ ಸುಕನ್ಯಾ ರವರು, ಕೃಷ್ಣನಾಯಕ ರವರ ಬೈಕಿನಲ್ಲಿ ಇದ್ದ ಪಿರಿಯಾಪಟ್ಟಣ ಶಾಖೆಯ ಮೂರುಕಾರ್ಪೋರೇಶನ್ ಬ್ಯಾಂಕಿನ ಚೆಕ್ ಗಳನ್ನು ಕಳ್ಳತನ ಮಾಡಿರುತ್ತೀರಿ ಎಂದರೆ ಸರಿಯಲ್ಲ.

11. ಆ ಬಗ್ಗೆ ಕೃಷ್ಣನಾಯಕರು ಹೆಚ್.ಡಿ.ಕೋಟೆಯ ಪೊಲೀಸ್ ಠಾಣೆಗೆ ನಿಮ್ಮ ವಿರುದ್ಧ ದೂರು ನೀಡಿದ್ದರು ಎಂದರೆ, ಪೊಲೀಸರ ಕರೆದ ಮೇರೆಗೆ ಪೊಲೀಸ್ ಠಾಣೆಗೆ ಹೋಗಿದ್ದೆ ಎಂದು ನುಡಿಯುತ್ತಾರೆ.

12. ಆಗ ಪೊಲೀಸರ ಮುಂದೆ ನಿಮಗೆ ಹಾಗೂ ಕೃಷ್ಣನಾಯಕ ನಡುವೆ ಯಾವುದೇ ಪತ್ರ ವ್ಯವಹಾರ ಇಲ್ಲ ಎಂದು ಮುಚ್ಚಳಿಕೆ ನೀಡಿದ್ದೀರಾ ಎಂದರೆ ಸರಿಯಲ್ಲ.

13. ಚೆಕ್ ನಂ.150539 ರ ಚೆಕ್ಕನ್ನು ನೀವು ಬೆಂಗಳೂರು ಸಿಟಿಯ ರಮೇಶ ಸುಲ್ತಾನ್ ಪುರ ಎಂಬುವವರಿಗೆ ನೀಡಿ ಅವರ ಮೂಲಕ ಸಿಸಿ ನಂ.29232/2015 ರಂತೆ ಪ್ರಕರಣ ದಾಖಲು ಮಾಡಿಸಿರುತ್ತೀರಾ ಎಂದರೆ ಸರಿಯಲ್ಲ.

14. ಸದರಿ ಪ್ರಕರಣದಲ್ಲಿ ಕಳುವಾದ ಚೆಕ್ ಎಂದು ಹೇಳಿದ ನಂತರ, ರಮೇಶ ಸುಲ್ತಾನ್ ಪುರ ರವರು ನ್ಯಾಯಾಲಯಕ್ಕೆ ಬರದೇ ಪ್ರಕರಣ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

15. ಚೆಕ್ ನಂ.150540 ರ ಚೆಕ್ಕನ್ನು ನೀವು ಅರಕಲಗೂಡು ತಾಲೂಕಿನ ಪುಟ್ಟಬೀರತಮ್ಮನ ಹಳ್ಳಿ ಕೊಪ್ಪಲು ಗ್ರಾಮದ ರಾಮಕೃಷ್ಣ ಎಂಬುವವರಿಗೆ ನೀಡಿ ಅವರ ಮೂಲಕ ಸಿಸಿ ನಂ.38/2014 ರಂತೆ ಪ್ರಕರಣ ದಾಖಲು ಮಾಡಿಸಿರುತ್ತೀರಾ ಎಂದರೆ ಸರಿಯಲ್ಲ.

16. ಸದರಿ ಪ್ರಕರಣದಲ್ಲಿ ಕಳುವಾದ ಚೆಕ್ ಎಂದು ಹೇಳಿದ ನಂತರ, ರಾಮಕೃಷ್ಣ ರವರು ನ್ಯಾಯಾಲಯಕ್ಕೆ ಬರದೇ ಪ್ರಕರಣ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

17. ನಾನು ಪಿರಿಯಾಪಟ್ಟಣ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಸಿ.ಸಿ.ನಂ.184/2016 ರಂತೆ ಇನ್ನೊಂದು ಚೆಕ್ ಬಳಸಿಕೊಂಡು ಪ್ರಕರಣ ದಾಖಲು ಮಾಡಿದ್ದೆ ಎಂದರೆ, ಪ್ರಕರಣ ದಾಖಲು ಮಾಡಿದ್ದು ನಿಜ ಆದರೆ ಚೆಕ್ ನಂಬರ್ ನನಗೆ ಗೊತ್ತಿಲ್ಲ. ಸದರಿ ಪ್ರಕರಣ ವಜಾ ಆಗಿರುತ್ತದೆ. ಈಗ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಇದೆ. ಅದರ ನಂಬರ್ ನನಗೆ ನೆನಪಿಲ್ಲ.

18. ಸದರಿ ಚೆಕ್ ಕಳ್ಳತನವಾಗಿರುವ ಚೆಕ್ ಎಂದು ಸದರಿ ಪ್ರಕರಣ ವಜಾ ಆಗಿದೆ ಎಂದರೆ, ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

19. 2016 ರಲ್ಲಿ ಸದರಿ ಪ್ರಕರಣ ವಜಾ ಆಗಿದ್ದು, ಇಲ್ಲಿಯವರೆಗೂ ನೀವು ಯಾವುದೇ ಅಪೀಲು ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

20. ನೀವು ಹಾಗೂ ಸುಕನ್ಯಾ ರವರು ಶಾಮೀಲಾಗಿ ಒಂದಲ್ಲ ಒಂದು ರೀತಿ ಕೃಷ್ಣನಾಯಕ ರವರಿಗೆ ತೊಂದರೆ ನೀಡುತ್ತಾ ಬರುತ್ತಿದ್ದೀರಿ ಎಂದರೆ ಸರಿಯಲ್ಲ.

21. ನಿಮಗೆ ಹಾಗೂ ಸುಕನ್ಯಾ ರವರಿಗೆ ಅಕ್ರಮ ಸಂಬಂಧ ಇದ್ದರಿಂದ, ಹೇಗಾದರೂ ಮಾಡಿ ಕೃಷ್ಣನಾಯಕರವರನ್ನು ಮನೆಯಿಂದ ಓಡಿಸಲು ಸುಳ್ಳು ಪ್ರಕರಣಗಳನ್ನು ಸೃಷ್ಠಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

22. ನೀವು ಸುಕನ್ಯಾ ರವರನ್ನು ಪ್ರೇರೇಪಿಸಿ ಸಿ.ನಂ.577/2015 ಮತ್ತು 563/2015 ರಂತೆ, ಕೃಷ್ಣನಾಯಕ ರವರು ಎರಡನೇ ವಿವಾಹವಾಗಿದ್ದಾರೆ ಎಂದು ಸುಳ್ಳು ಪ್ರಕರಣ ದಾಖಲು ಮಾಡಿಸಿದ್ದು, ಅವು ವಜಾ ಆಗಿವೆ ಎಂದರೆ ಸರಿಯಲ್ಲ.

23. ಸದರಿ ಪ್ರಕರಣ ನಡೆಯುತ್ತಿರುವಾಗ ಸುಕನ್ಯಾ ರವರು ಮೃತರಾಗಿದ್ದು, ಅವರ ಪರವಾಗಿ ಅವರ ಮಗಳಾದ ನಿಮ್ಮ ಪತ್ನಿ ಅನುಶ್ರೀ ರವರು ಸಾಕ್ಷಿ ನುಡಿದಿರುತ್ತಾರೆ ಎಂದರೆ ಸರಿಯಲ್ಲ.

24. ಪಿರಿಯಾಪಟ್ಟಣದ ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಲಯದಲ್ಲಿ ನೀವು ಪಿ.ಸಿ.ಆರ್ ಪ್ರಕರಣ ದಾಖಲು ಮಾಡಿದ್ದು, ಅದೂ ಸಹ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ.

25. ಸುಕನ್ಯಾ ರವರು 2020 ರಲ್ಲಿ ಮೃತರಾಗಿರುತ್ತಾರೆ. ದಿನಾಂಕ ನನಗೆ ನೆನಪಿಲ್ಲ. ಅವರು ಮೃತರಾದ ನಂತರ ನಿಮ್ಮ ಪತ್ನಿ ಸದರಿ ಪ್ರಕರಣದಲ್ಲಿ ಕೃಷ್ಣನಾಯಕ ವಿರುದ್ಧ ಸಾಕ್ಷಿ ಹೇಳಿದ್ದಾರೆ ಎಂದರೆ ಸರಿಯಲ್ಲ.

26. ಅನುಶ್ರೀ ರವರು ಕೃಷ್ಣನಾಯಕರ ಮಗಳಾಗಿದ್ದರೂ ಸಹ ನಿಮ್ಮ ಪ್ರೇರೇಪಣೆಯ ಮೇಲೆ ಅವರು ಸಾಕ್ಷಿ ನುಡಿದಿದ್ದಾರೆ ಎಂದರೆ ಸರಿಯಲ್ಲ.

27. ನೀವು ಕೃಷ್ಣ ನಾಯಕ ವಿರುದ್ಧ ಹಾಕಿದ್ದ ಎಲ್ಲಾ ಪ್ರಕರಣಗಳು ವಜಾ ಆಗಿದ್ದರಿಂದ ಅವರ ಮೇಲೆ ಸೇಡು ತೀರಿಸಿಕೊಳ್ಳಲು ಸುಳ್ಳು ದಾಖಲೆ ಸೃಷ್ಠಿ ಮಾಡಿ ಈ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

28. ಕೃಷ್ಣನಾಯಕವರು ನಿಮಗೆ ಯಾವುದೇ ಕ್ರಯ ಕರಾರು ಪತ್ರ ಬರೆದಿಲ್ಲ ಹಾಗೂ ನೊಂದಣಿ ಮಾಡಿಸಿಲ್ಲ ಎಂದರೆ ಸರಿಯಲ್ಲ.

29. ಕೃಷ್ಣನಾಯಕರು ಉಪ ನೊಂದಣಿ ಕಛೇರಿಗೆ ಹಾಜರಾಗಿಲ್ಲ, ನೀವು ಉಪನೊಂದಣಾಧಿಕಾರಿಗಳ ಜೊತೆ ಶಾಮಿಲಾಗಿ ಸುಕನ್ಯಾ ರವರಿಂದ ಕೃಷ್ಣನಾಯಕ ರವರ ಪೋಟೋವನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದಾಖಲೆ ಸೃಷ್ಠಿ ಮಾಡಿದ್ದೀರಾ ಎಂದರೆ ಸರಿಯಲ್ಲ.

30. ಕರಾರು ಪತ್ರದಲ್ಲಿರುವ ಸಹಿ ಗಳು ಕೃಷ್ಣನಾಯಕರ ಸಹಿ ಅಲ್ಲ ಎಂದರೆ ಸರಿಯಲ್ಲ.

31. ಕೃಷ್ಣನಾಯಕರ ಹೆಸರಿನಲ್ಲಿರುವ ಮನೆಯನ್ನು ಲಪಟಾಯಿಸಿ ಅವರನ್ನು ಗ್ರಾಮದಿಂದ ಹೊರಹಾಕಬೇಕು ಎಂಬ ಸಂಚಿನಿಂದ ಈ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಅವರು ನಾನು ನೀಡಿರುವ ಮುಂಗಡ ಹಣವನ್ನು ಬಡ್ಡಿ ಸಮೇತ ವಾಪಸ್ ನೀಡಿದರೆ ಸಾಕು ಎಂದು ನುಡಿಯುತ್ತಾರೆ.

32. ಕೃಷ್ಣನಾಯಕರು ನಿಮ್ಮ ಬಳಿ ಹಣ ಪಡೆಯದ ಕಾರಣ, ನಿಮಗೆ ಬಡ್ಡಿ ಸಮೇತ ಹಣ ನೀಡುವ ಪ್ರಮೇಶ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಓ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ